ಬಸ್ ನಿಲ್ದಾಣ ನವೀಕರಿಸುವುದು.

4193(4607) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಣೆಬೆನ್ನೂರು ನಗರದಲ್ಲಿರುವ ಬಸ್ ನಿಲ್ದಾಣವನ್ನು ನವೀಕರಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜುವೆಚ್ಚ ಎಷ್ಟು ಮತ್ತು ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :—

ಅ) ಹೌದು

ಆ) ಹಾಲಿ ಇರುವ ರಾಣೆಬೆನ್ನೂರು ಬಸ್ ನಿಲ್ದಾಣವನ್ನು ನವೀಕರಿಸುವ ಪ್ರಕ್ರಿಯೆ ಪ್ರಾರಂಭಿಸುವ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆ ಮತ್ತು ಬೆಳಗಾವಿ ವಿಭಾಗಾಧಿಕಾರಿಯವರು ಅಧಿಸೂಚನೆಗಳನ್ನು ಹೊರಡಿಸಿ, ರಾಷ್ಟ್ರೀಯ ಹೆದ್ದಾರಿಯ ಮಧ್ಯದಿಂದ ಬಿಡಬೇಕಾಗಿರುವ ರಸ್ತೆ ಅಂಚಿನ ವಿಸ್ತಾರದ ಬಗ್ಗೆ ಪ್ರಕಟಣೆ ಹೊರಡಿಸಿರುತ್ತಾರೆ. ಬಸ್ ನಿಲ್ದಾಣದ ಮುಂಭಾಗದ ರಾಷ್ಟ್ರೀಯ ಹೆದ್ದಾರಿಯ ರಸ್ತೆ ಅಂಚಿನ ವಿಸ್ತಾರದ ಬಗ್ಗೆ ನಿರ್ಣಯವಾಗಬೇಕಿದ್ದು ಅವರೊಡನೆ ಸಮಾಲೋಚನೆ ನಡೆಸಲಾಗುತ್ತಿದೆ. ಇದರಿಂದಾಗಿ ಯೋಜನೆಯ ರೂಪು ರೇಷೆಗಳು ಅಂತಿಮಗೊಂಡಿರುವುದಿಲ್ಲ, ಮತ್ತು ನಿಖರವಾದ ವೆಚ್ಚವನ್ನು ಅಂದಾಜಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ನಿರ್ಣಯ ತೆಗೆದುಕೊಂಡ ನಂತರ ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿ, ಸದರಿ ಕಾರ್ಯವನ್ನು ಕೈಗೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶಿವಾಜಿನಗರದ ಬಸ್ ನಿಲ್ದಾಣ.

4194(4344) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಶಿವಾಜಿನಗರ ನಗರ ರಸ್ತೆ ಸಾರಿಗೆ ಬಸ್ ನಿಲ್ದಾಣ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು ;

ಅ) ಈ ಬಸ್ ನಿಲ್ದಾಣ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಆ) ಇದುವರೆಗೆ ಖರ್ಚು ಮಾಡಿರುವ ಹಣವೆಷ್ಟು;

ಈ) ಈ ಬಸ್ ನಿಲ್ದಾಣದ ಕಾರ್ಯ ಎಂದು ಪೂರ್ಣಗೊಳ್ಳಬೇಕಾಗಿತ್ತು.

ಉ) ಈ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಊ) ಈ ಬಸ್ ನಿಲ್ದಾಣದ ಕಾರ್ಯ ಎಂದು ಸಂಪೂರ್ಣವಾಗುವುದು;

ಶ್ರೀ ಸಿ. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು) :—

ಅ) ಶಿವಾಜಿನಗರ ನಗರ ರಸ್ತೆ ಸಾರಿಗೆ ಬಸ್ ನಿಲ್ದಾಣ ಕಾಮಗಾರಿಯನ್ನು ಆಗಸ್ಟ್, 1999ರಲ್ಲಿ ಪ್ರಾರಂಭಿಸಲಾಯಿತು.

ಆ) ಈ ಬಸ್ ನಿಲ್ದಾಣ ನಿರ್ಮಾಣದ ಅಂದಾಜು ವೆಚ್ಚ ರೂ. 671.00 ಲಕ್ಷಗಳು.

ಇ) ಇದುವರೆಗೆ ರೂ. 488.83 ಲಕ್ಷಗಳು ಖರ್ಚು ಮಾಡಲಾಗಿದೆ.

ಈ) ಟೆಂಡರ್ ನಿಯಮದ ಪ್ರಕಾರ, ಈ ಬಸ್ ನಿಲ್ದಾಣ ನಿರ್ಮಾಣ ಕಾರ್ಯ ಅಕ್ಟೋಬರ್, 2000ಕ್ಕೆ ಪೂರ್ಣಗೊಳ್ಳಬೇಕಾಗಿತ್ತು.

ಉ) ಬಸ್ ನಿಲ್ದಾಣದ ನಿವೇಶನದ ಒಳಗೆ ಅಡ್ಡ ಬಂದ ವಿದ್ಯುತ್ ತಂತಿ, ಭೂಮಿಯೊಳಗಿನ ಕೇಬಲ್‌ಗಳು, ನೀರು ಸರಬರಾಜು, ನಿರ್ಮಲೀಕರಣ ಕೊಳವೆಗಳ ಸ್ಥಳಾಂತರ, ಸತತ ಮಳೆ ಮತ್ತು ಸೇಂಟ್ ಮೇರಿ ಹಬ್ಬದ ಸಲುವಾಗಿ ಸಬ್‌ವೇ ಕೆಲಸವು ಸುಮಾರು 28 ದಿನಗಳಷ್ಟು ವಿಳಂಬ ಆಗಿದ್ದರಿಂದ ಒಟ್ಟಾರೆ ಸ್ವಲ್ಪ ವಿಳಂಬವಾಗಿರುತ್ತದೆ.

ಊ) ಈ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವು ನವೆಂಬರ್, 2000ರ ವೇಳೆಗೆ ಪೂರ್ಣಗೊಳಿಸಲಾಗುವುದು.